**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಎಸ್.ಸಿ. ನಂ. 5017/2022**

**ಪ್ರಾಸಾ -- 13**

**ಚಾಸಾ –2**

ಸಾಕ್ಷಿಯ ಹೆಸರು– ಕೃಷ್ಣಮೂರ್ತಿ

ತಂದೆಯ ಹೆಸರು – ಬಸವಯ್ಯ

ವಯಸ್ಸು – 55 ವರ್ಷ

ವೃತ್ತಿ – ಕೂಲಿ ಕೆಲಸ

ವಿಳಾಸ – ಹನೂರು, ಚಾಮರಾಜನಗರ,

ದಿಃ 31.01.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನನಗೆ ಮೈನ್-ಸ್ವಾಮಿ ರವರ ಪರಿಚಯ ಇದೆ. 3 ವರ್ಷಗಳ ಹಿಂದೆ ವಿರಾಜಪೇಟೆಯಲ್ಲಿ ಮೈನ್-ಸ್ವಾಮಿ ಯವರೊಂದಿಗೆ ರಸ್ತೆಯ ಕೆಲಸಕ್ಕೆ ಬಂದಿದ್ದೆ. ನನ್ನೊಂದಿಗೆ ಹಿಂದಿ ಮಾತನಾಡುತ್ತಿದ್ದ 4 ಜನ ರಸ್ತೆಯ ಕೆಲಸಕ್ಕೆ ಬಂದಿದ್ದರು. ವಾಟ್ಸ್ ಅಪ್ ವಿಡಿಯೋ ಕಾಲ್ ಮುಖಾಂತರ ತೋರಿಸಿದ ವ್ಯಕ್ತಿಗಳ ಪರಿಚಯ ಇಲ್ಲ. ವಿರಾಜಪೇಟೆಯಿಂದ ಸುಮಾರು 5 ಕಿ.ಮಿ ದೂರದಲ್ಲಿ ರಸ್ತೆಯ ಪಕ್ಕದಲ್ಲಿ ಇದ್ದ ಲೈನ್ ಮನೆಯಲ್ಲಿ ನಾನು ಮತ್ತು ಹಿಂದಿ ಮಾತನಾಡುತ್ತಿದ್ದ 4 ಜನ ವಾಸವಾಗಿದ್ದೆವು. ನಾವು ವಾಸವಾಗಿದ್ದ ಲೈನ್ ಮನೆಯ ಪಕ್ಕದಲ್ಲಿ ಯಾರು ವಾಸವಾಗಿರಲಿಲ್ಲ.

2. ನನಗೆ ಚಿಮ್ಮಿ ಎನ್ನುವ ಮಹಿಳೆಯ ಪರಿಚಯ ಇಲ್ಲ. ಒಬ್ಬ ಮಹಿಳೆ ಮೃತಪಟ್ಟಿದ್ದು, ನೀವು ಸಾಕ್ಷಿ ಹಾಕಬೇಕು ಎಂದು ಹೇಳಿ ಪೊಲೀಸರು ನನ್ನ ಸಹಿಗಳನ್ನು ಕೆಲವೊಂದು ದಾಖಲೆಗಳ ಮೇಲೆ ಪಡೆದುಕೊಂಡಿದ್ದರು. ನನಗೆ ಮೃತ ಮಹಿಳೆ ಯಾರು ಆಕೆಯ ಹೆಸರು ಏನು ಎಂದು ಗೊತ್ತಿಲ್ಲ ಹಾಗೂ ಪೊಲೀಸರು ನನಗೆ ಏನೂ ಹೇಳಿಲ್ಲ. ಆಕೆ ಹೇಗೆ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಪೊಲೀಸರು ಹೇಳಿರುವುದಿಲ್ಲ. ನಾನು ಈಗ ವಾಟ್ಸ್ ಅಪ್ ವಿಡಿಯೋ ಕಾಲ್ ಮುಖಾಂತರ ತೋರಿಸಿದ ಆರೋಪಿಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಅವರುಗಳು ಆ ಮಹಿಳೆಗ ಹಲ್ಲೆ ಮಾಡಿದ್ದಾರೆ ಅನ್ನುವ ವಿಷಯ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರ ಸಮಕ್ಷಮ

ಹೇಳಿಕೆ ನೀಡಿರುವುದಿಲ್ಲ. ನನ್ನನ್ನು ಪೊಲೀಸರು ನ್ಯಾಯಾಧೀಶರ ಸಮಕ್ಷಮ ಕರೆದುಕೊಂಡು ಹೋಗಿದ್ದು ನಾನು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ. ಏನು ಹೇಳಿಕೆ ನೀಡಿದ್ದೆ ಎಂದು ನನಗೆ ನೆನಪಿಗೆ ಬರುತ್ತಿಲ್ಲ. ಈಗ ತೋರಿಸಿದ ಹೇಳಿಕೆಯಲ್ಲಿ ನನ್ನ ಹೆಬ್ಬೆಟ್ಟಿನ ಗುರುತು ಇದೆ. ಸಾಕ್ಷಿ ತನ್ನ ಹೆಬ್ಬೆಟ್ಟಿನ ಗುರುತು ಗುರುತಿಸಿದ ಹೇಳಿಕೆಯನ್ನು ನಿಪಿ 36 ಎಂದು ಗುರುತಿಸಲಾಯಿತು.

3. ಪೊಲೀಸರು ನನ್ನನ್ನು ಮಡಿಕೇರಿಗೆ ಕರೆದುಕೊಂಡು ಹೋಗಿದ್ದರು. ನಾನು ಅಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲೆಯಲ್ಲಿ ಹೆಬ್ಬೆಟ್ಟಿನ ಗುರುತು ಮಾಡಿದ್ದೆ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಹೆಬ್ಬೆಟ್ಟಿನ ಗುರುತು ಇದೆ. ಸಾಕ್ಷಿ ತನ್ನ ಹೆಬ್ಬೆಟ್ಟಿನ ಗುರುತು ಗುರುತಿಸಿದ ದಾಖಲೆ ಗುರುತು ಪತ್ತೆ ಕವಾಯತ್ತು ಆಗಿದ್ದು ಅದನ್ನು ನಿಪಿ 37 ಎಂದು ಗುರುತಿಸಲಾಯಿತು. ನಾನು ಅಲ್ಲಿ ಯಾವುದೇ ವ್ಯಕ್ತಿಗಳನ್ನು ಗುರುತು ಪತ್ತೆ ಮಾಡಿರುವುದಿಲ್ಲ. ನಿಪಿ 37 ರಲ್ಲಿ ಬರೆದ ವಿವರಗಳು ನನಗೆ ಗೊತ್ತಿಲ್ಲ. ನಿಪಿ 37 ರಲ್ಲಿ ನನ್ನೊಂದಿಗೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

4. ಈಗ್ಗೆ 3 ವರ್ಷಗಳ ಹಿಂದೆ ವಿ ಬಾಡಗ, ಬಿಟ್ಟಂಗಾಲ ಹಾಗೂ ನಾಂಗಾಲ ಗ್ರಾಮಗಳಲ್ಲಿ ರಸ್ತೆ ಮತ್ತು ಚರಂಡಿಯ ಕೆಲಸಕ್ಕೆ ಬಂದಿದ್ದು, ಕೆಲಸ ಮುಗಿದಿದ್ದರಿಂದ ದಿಃ 02.03.2022 ರಂದು ನಮ್ಮನ್ನು ಮೈನ್ ಸ್ವಾಮಿ ರವರು ವಿ ಬಾಡಗ ಗ್ರಾಮಕ್ಕೆ ಕರೆದುಕೊಂಡು ಹೋಗಿ ರಸ್ತೆಯ ಬದಿಯಲ್ಲಿದ್ದ ಲೈನ್ ಮನೆಯಲ್ಲಿ ಇರಿಸಿದ್ದು, ನಾವು ಲೈನ್ ಮನಯ ಒಂದು ಭಾಗದಲ್ಲಿ ವಾಸವಾಗಿದ್ದು ಇನ್ನೊಂದು ಬದಿಯಲ್ಲಿ ಒಬ್ಬ ಹೆಂಗಸು ವಾಸಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ದಿನ ರಾತ್ರಿ 8.00 ಗಂಟೆಯ ಸುಮಾರಿಗೆ ನಾನು ಮನೆಯ ಹೊರಗಡೆ ಕುಳಿತಿದ್ದಾಗ ಇಬ್ಬರು ವ್ಯಕ್ತಿಗಳು

ಪಕ್ಕದ ಲೈನ್ ಮನೆಗೆ ಬಂದಿದ್ದನ್ನು ನೋಡಿ ನೀವು ಯಾರು, ಇಲ್ಲಿಗೆ ಇಷ್ಟು ಹೊತ್ತಿಗೆ ಯಾಕೆ ಬಂದಿದ್ದೀರಿ ಎಂದು ವಿಚಾರಿಸಿದ್ದು ಆಗ ಅವರು ಆ ಲೈನ್ ಮನೆಯಲ್ಲಿರುವ ಮಹಿಳೆ ನಮ್ಮ ಸಂಬಂಧಿಕರು, ಇದು ನಮ್ಮ ಕುಟುಂಬದ ವಿಚಾರ, ನೀವು ಹೋಗಿ ಮಲಗಿಕೊಳ್ಳಿ ಎಂದು ನನಗೆ ಬೆದರಿಸಿದ್ದರಿಂದ ನಾನು ಲೈನ್ ಮನೆಯ ಒಳಗೆ ಹೋಗಿ ಮಲಗಿಕೊಂಡೆ ಎಂದರೆ ಸರಿಯಲ್ಲ. ನಾವು ಮಲಗಿದ ಸ್ವಲ್ಪ ಸಮಯದಲ್ಲಿ ಹೆಂಗಸು ವಾಸವಿದ್ದ ಲೈನ್ ಮನೆಯ ಭಾಗದಲ್ಲಿ ಗಲಾಟೆಯಾದ ಶಬ್ದ ಕೇಳಿಸಿದ್ದು, ರಾತ್ರಿ ಸುಮಾರು 11.00 ಗಂಟೆಯವರೆಗೂ ಶಬ್ದ ಕೇಳಿಸುತ್ತಿತ್ತು, ಆ ಇಬ್ಬರು ವ್ಯಕ್ತಿಗಳು ನನಗೆ ನಮ್ಮ ಕುಟುಂಬದ ವಿಚಾರದಲ್ಲಿ ತಲೆ ಹಾಕಬೇಡ ಎಂದು ಬೆದರಿಸಿದ್ದ ಕಾರಣ ನಾನು ಹೆದರಿ ಸುಮ್ಮನಿದ್ದೆ ಎಂದರೆ ಸರಿಯಲ್ಲ. ಮಾರನೇ ದಿನ ಬೆಃ 6.00 ಗಂಟೆಗೆ ನೋಡಿದಾಗ ಪಕ್ಕದ ಲೈನ್ ಮನೆಯಲ್ಲಿದ್ದ ಹೆಂಗಸು ಮನೆಯ ಹೊರಗಡೆ ಒರಾಂಡದಲ್ಲಿ ಇದ್ದು ಆಕೆಯ ಗಂಟಲಿನಲ್ಲಿ ಗಾಯವಾಗಿ ರಕ್ತ ಬರುತ್ತಿದ್ದು ನಾನು ಮಾತನಾಡಿಸಿದಾಗ ಸರಿಯಾಗಿ ಮಾತನಾಡದೇ ತೊದಲುತ್ತ 2 ಬೆರಳನ್ನು ತೋರಿಸಿ ಕುತ್ತಿಗೆ ಕುಯ್ದ ಬಗ್ಗೆ ಕೈ ಸನ್ನೆ ಮಾಡಿದ್ದು, ಆಕೆ ಕುಡಿಯಲು ನೀರು ಬೇಕು ಎಂದು ಕೇಳಿದ್ದರಿಂದ ನಾನು ಆಕೆಗೆ ನೀರು ಕುಡಿಯಲು ಕೊಟ್ಟಿದ್ದು ಆಕೆಗೆ ನೀರು ಕುಡಿಯಲು ಆಗಲಿಲ್ಲ ಎಂದರೆ ಸರಿಯಲ್ಲ. ನಾನು ಈ ವಿಚಾರವನ್ನು ಮೇಸ್ತ್ರಿ ಮೈನ್ ಸ್ವಾಮಿ ರವರಿಗೆ ಫೋನ್ ಮಾಡಿ ತಿಳಿಸಿದ್ದು ಅವರು ನಾನು ಬರುವವರೆಗೂ ನೀವು ಅಲ್ಲಿಯೇ ಇರಿ ಎಂದು ಹೇಳಿದ್ದು, ಆದರೆ ನಮಗೆ ಹೆದರಿಕೆ ಆದ ಕಾರಣ ನಾವು ಲೈನ್ ಮನೆಯಿಂದ ಹೊರಟು ಶಾಲೆಯ ಹತ್ತಿರ ಸಮುದಾಯ ಭವನಕ್ಕೆ ಹೋಗಿ ಇದ್ದೆವು ಎಂದರೆ ಸರಿಯಲ್ಲ. ನಂತರ ಮೈನ್ ಸ್ವಾಮಿಯವರು ಸಮುದಾಯ ಭವನದ ಬಳಿಗೆ ಬಂದು ನನ್ನನ್ನು ವಿಚಾರಿಸಿದಾಗ ನಾನು ರಾತ್ರಿ ನಡೆದ ವಿಚಾರವನ್ನು ಅವರಿಗೆ ತಿಳಿಸಿದ್ದೆ ಎಂದರೆ ಸರಿಯಲ್ಲ. ನಾನು ರಾತ್ರಿ ಆ ಇಬ್ಬರು ವ್ಯಕ್ತಿಗಳನ್ನು ವಿದ್ಯುತ್ ದೀಪದ ಬೆಳಕಿನಲ್ಲಿ ನೋಡಿದ್ದು ಅವರು ವಾಟ್ಸ್ ಅಪ್ ವಿಡಿಯೋ ಕಾಲ್ ಮುಖಾಂತರ ತೋರಿಸಿದ ಆರೋಪಿಗಳು ಆಗಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನ್ಯಾಯಾಧೀಶರ ಸಮಕ್ಷಮ ನಿಪಿ 36 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 09.03.2022 ರಂದು ನನಗೆ ಈಗ ಓದಿ ಹೇಳಿದಂತೆ "

ನಾನು ——— ನೋಡಿದರೆ ಗುರುತಿಸುತ್ತೇನೆ " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ನಿಪಿ 36 ಎಂದು ಗುರುತಿಸಲಾಯಿತು.

5. ದಿಃ 23.03.2022 ರಂದು ನನ್ನನ್ನು ಪೊಲೀಸರು ಜಿಲ್ಲಾ ಕಾರಾಗೃಹಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ 1 ನೇ ಆರೋಪಿಯ ಗುರುತು ಪತ್ತೆ ಕವಾಯತ್ತು ಮಾಡುವ ಸಮಯದಲ್ಲಿ ನಾನು ಹಾಗೂ ಚಾಸಾ 32 ಹಾಜರಿದ್ದು, ಅಲ್ಲಿ 10 ಜನ ವ್ಯಕ್ತಿಗಳನ್ನು ನಿಲ್ಲಿಸಿದ್ದು, 1 ನೇ ಆರೋಪಿಯನ್ನು 1 ನೇ ಸುತ್ತಿನಲ್ಲಿ 1 ನೇ ಸ್ಥಾನದಲ್ಲಿ, 2 ನೇ ಸುತ್ತಿನಲ್ಲಿ 5 ನೇ ಸ್ಥಾನದಲ್ಲಿ ಹಾಗೂ 3 ನೇ ಸುತ್ತಿನಲ್ಲಿ 8 ನೇ ಸ್ಥಾನದಲ್ಲಿ ನಿಲ್ಲಿಸಿದ್ದು, ನಾನು ಸದರಿ ಆರೋಪಿಯ ಗುರುತು ಪತ್ತೆ ಹಚ್ಚಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಆರೋಪಿಯ ಗುರುತು ಪತ್ತೆ ಕವಾಯತ್ತು ಮಾಡುವ ಸಮಯದಲ್ಲಿ ನಾನು ಹಾಗೂ ಚಾಸಾ 31 ಹಾಜರಿದ್ದು, ಅಲ್ಲಿ 10 ಜನ ವ್ಯಕ್ತಿಗಳನ್ನು ನಿಲ್ಲಿಸಿದ್ದು, 2 ನೇ ಆರೋಪಿಯನ್ನು 1 ನೇ ಸುತ್ತಿನಲ್ಲಿ 4 ನೇ ಸ್ಥಾನದಲ್ಲಿ, 2 ನೇ ಸುತ್ತಿನಲ್ಲಿ 2 ನೇ ಸ್ಥಾನದಲ್ಲಿ ಹಾಗೂ 3 ನೇ ಸುತ್ತಿನಲ್ಲಿ 9 ನೇ ಸ್ಥಾನದಲ್ಲಿ ನಿಲ್ಲಿಸಿದ್ದು, ನಾನು ಸದರಿ ಆರೋಪಿಯ ಗುರುತು ಪತ್ತೆ ಹಚ್ಚಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 36, 37, ಮತ್ತು 38 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)